(ಆ) ಸಿಂಧನೂರಿನ ಉಪ್ಪಳ ಗ್ರಾಮದಲ್ಲಿ ನಡೆದಿರುವ ಗಲಭೆ

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ಸಿಂಧನೂರು ತಾಲ್ಲೂಕಿನ ಉಪ್ಪಳ ಗ್ರಾಮದಲ್ಲಿ ದಿನಾಂಕ 23-3-2000 ದಂದು ಗಂಗಾವತಿ ಪಟ್ಟಣದಲ್ಲಿ ನಡೆಯುವ ಗ್ರಾಮ ಪಂಚಾಯತಿ ಸಮಾವೇಶಕ್ಕೆ ಪಂಚಾಯತಿ ಸದಸ್ಯರಾದ ಸೋಮಶೇಖರಗೌಡ ಹಾಗೂ ಅವರ ಕ್ಷೇತ್ರದ ಹಿತರು ಗಳು ಹೋಗುತ್ತಿರುವಾಗ ಅವರ ಮೇಲೆ ಕರಿಲಿಂಗಪ್ಪ ಹಾಗೂ ರಾಜೂಟಪ್ಪ ಹಾಗೂ ಇನ್ನೂ ಇರುವ ಮಂದಿ ಸೇರಿ ಹಲ್ಲೆ ಮಾಡಿ ಹಣಕ್ಕೆ ಕಲ್ಲಿನಿಂದ ಜಜ್ಜಿರುವುದರಿಂದ ಇಂದು ಅವರ ದೇಹಸ್ಥಿತಿ ಚಿಂತಾಜನಕವಾಗಿದೆ. ಅವರು ಬಳ್ಳಾರಿ ಆಸ್ಪತ್ರೆಯಲ್ಲಿ ನರಳುತ್ತಿದ್ದಾರೆ. ಇವರ ಹಲ್ಲೆ ನಡೆಸಿದ ರಾಜೂಟಪ್ಪ ಮತ್ತು ಕರಿಲಿಂಗಪ್ಪ ಮತ್ತು ನೂರಾರು ಮಂದಿ ಜನರು ನಂತರ ಇಪ್ಪತ್ತು ಮನೆಗಳಿಗೆ ನುಗ್ಗಿ ಮನೆಯಲ್ಲಿದ್ದ ಹೆಣ್ಣುಮಕ್ಕಳಿಗೋ ಹೊಡೆದು ಸಾಮಗ್ರಿಗಳನ್ನು ನಷ್ಟಮಾಡಿ ಭಯಾನಕ ವಾತಾವರಣವನ್ನು ಸೃಷ್ಟಿಮಾಡಿದ್ದಾರೆ. ಇದರ ಬಗ್ಗೆ ಆ ಗ್ರಾಮದ ಜನತೆ ಐದು ದೂರಗಳನ್ನು ಕೊಟ್ಟಿದ್ದರೂ ಕೂಡ ಕೇವಲ ಒಂದುದೂರನ್ನು ಮಾತ್ರ ಪೋಲೀಸ್ ಇಲಾಖೆಯವರು ದಾಖಲು ಮಾಡಿಕೊಂಡಿದ್ದಾರೆ. ಇಂದು ಉಪ್ಪಳಗ್ರಾಮದಲ್ಲಿ ಗಂಭೀರವಾದ ವಾತಾವರಣ ಇದೆ. ಅಲ್ಲಿರತಕ್ಕಂಥ ಪೋಲೀಸ್ ವ್ಯವಸ್ಥೆ ಸಂಪೂರ್ಣವಾಗಿ ನಿಷ್ಕ್ರಿಯವಾಗಿದೆ. ಇಂಥ ಹಲವಾರು ಘಟನೆಗಳು ನನ್ನ ಕ್ಷೇತ್ರದಲ್ಲಿ ಪ್ರತಿ ವಾರ, 15ದಿನಗಳು, ತಿಂಗಳಿಗೊಮ್ಮೆ ಸಾಮೂಹಿಕವಾಗಿ ನಡೆಯುತ್ತಲೇ ಇದೆ. ನಾನು ಗೃಹ ಸಚಿವರಲ್ಲಿ ಹಾಗೂ ಮುಖ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ ಮೊದಲು ನೀವು ಅಲ್ಲಿಯ ಸ್ಥಳೀಯ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕು. ಇದಲ್ಲದೇ ಇನ್ನು ಮುಂದೆ ಅಲ್ಲಿ ಶಾಂತಿಯನ್ನು ಕಾಪಾಡಲು ಏನು ವ್ಯವಸ್ಥೆಯನ್ನು ಮಾಡಬೇಕೋ ಆ ವ್ಯವಸ್ಥೆಯನ್ನು ಬೇಗನೇ ಮಾಡಬೇಕೆಂದು ಒತ್ತಾಯಪಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಸಿಂಧನೂರಿನಲ್ಲಿ ಪ್ರಕ್ಷುಬ್ಧವಾದ ವಾತಾವರಣ ಸೃಷ್ಟಿಯಾಗಿರುವುದು ನಿಜ. ಇದಕ್ಕೆ ಬಹಳ ದಿನಗಳಿಂದ ವೈಶಮ್ಯ ಇತ್ತು. ಅದು ಹೆಚ್ಚಾಗಿ ಅಲ್ಲಿನ ಹೆಚ್ಚು ಹಳ್ಳಿಗಳಲ್ಲಿ ಈರೀತಿಯ ವಾತಾವರಣ ಸೃಷ್ಟಿಯಾಗಿದೆ. ಈ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಅಧಿಕಾರಿಗಳ ಮೇಲೆ ಒತ್ತಡವನ್ನು ತರುವುದರಿಂದ ಅಲ್ಲಿ ಹೆಚ್ಚಾಗಿ ಗುಂಪು ಘರ್ಷಣೆಗಳಾಗಲು ಕಾರಣವಾಗಿದೆ. ಇದರಿಂದ ಹಂಪನಗೌಡರಿಗೆ ಬಹಳ ತೊಂದರೆಗಳಾಗುತ್ತಿದೆ. ಅವರು ಗೆದ್ದನಂತರ ಆಗಿರುವ ಮೊದಲನೆಗೆಗಳು ಮತ್ತು ನಂತರದ ಬೆಳವಣಿಗೆಗಳಲ್ಲಿ ಅವರ ಆಸ್ತಿಗೆ ಆಗಿರುವ ನಷ್ಟದ ವಿಚಾರಗಳೆಲ್ಲವೂ ಆ ಭಾಗದಿಂದ ಬಂದಿರುವ ಗೃಹ ಸಚಿವರಾದ ಮಾನ್ಯ ಖರ್ಗೆಯವರಿಗೂ ತಿಳಿದೇ ಇದೆ. ದಿನಾಂಕ 26ನೇ ತಾರೀಖು ಏನು ಗಲಭೆ ನಡೆದಿದೆ ಅದಕ್ಕೆ ಸಂಬಂಧಪಟ್ಟಂತೆ ಕೆಲವು ಫೋಟೋಗಳನ್ನು ಕೂಡ ನಾವು ಗೃಹ ಸಚಿವರಿಗೆ ಕಳುಹಿಸಿಕೊಡುತ್ತೇವೆ. ನಮ್ಮ ಪಕ್ಷದಿಂದ ಒಂದು ನಿಯೋಗವನ್ನು ಕೂಡ ಮುಖ್ಯ ಮಂತ್ರಿಗಳ ಬಳಿಗೆ ಕರೆದುಕೊಂಡು ಹೋಗಿ ಇದರ ಬಗ್ಗೆ ವಿಚಾರಣೆಯನ್ನು ಕೂಡ ಮಾಡಬೇಕೆಂದು ಒತ್ತಾಯ ಮಾಡುಯೋಜನೆ ಮಾಡಿದ್ದೇವೆ. ಏಕೆಂದರೆ ಅಲ್ಲಿ ಪರಿಸ್ಥಿತಿ ಹದಗೆಡುವ ಹಂತದಲ್ಲಿದೆ. ಮಾನ್ಯ ಗೃಹ ಸಚಿವರಿಗೆ ತಿಳಿದಿರುವಂತೆ ರಾಯಚೂರಿನಲ್ಲಿ ಅನೇಕ ಶಕ್ತಿಗಳು ಕೆಲಸ ಮಾಡುತ್ತಿವೆ. ನಾಳೆ ಇದರಿಂದಾಗಿ ಕಾನೂನು ಪರಿಸ್ಥಿತಿ ಹದಗೆಡುತ್ತದೆ. ಕಾನೂನು ಪರಿಸ್ಥಿತಿ ಹದಗೆಟ್ಟ ಮೇಲೆ ಅದನ್ನು ನಿಯಂತ್ರಣ ಮಾಡುವುದು ಬಹಳ ಕಷ್ಟದ ಕೆಲಸ. ಆದುದರಿಂದ ಗೃಹ ಸಚಿವರು ಇದರ ಬಗ್ಗೆ ವಿಶೇಷವಾದ ಆಸಕ್ತಿಯನ್ನು ವಹಿಸಿ ಅಲ್ಲಿ ಯಾರೇ ತಪ್ಪು ಮಾಡಿರಲಿ ಅವರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಅವರು ಜನತಾದಳದವರಾಗಿರಬಹುದು ಕಾಂಗ್ರೆಸ್ ಪಕ್ಷದವರಾಗಿರಬಹುದು. ಯಾರೇ ತಪ್ಪಿತಸ್ಥರಾಗಿದ್ದರೂ ಕೂಡ ಅವರಿಗೆ

ಶಿಕ್ಷೆಯಾಗಬೇಕು. ಕೇವಲ ಒನ್ ಸೈಡೆಡ್ ಆದರೆ ತಪ್ಪಾಗುತ್ತದೆ. ಆದರೆ ಈ ರೀತಿ ಖರ್ಗೆಯವರು ಮಾಡುವುದಿಲ್ಲವೆಂದು ನನಗೆ ವಿಶ್ವಾಸವಿದೆ. ಗೃಹ ಸಚಿವರು ಈ ಸಂಬಂಧದ ಅಧಿಕಾರಿಗಳಿಗೆ ಒಂದು ಸ್ಪಷ್ಟವಾದ ಸಂದೇಶ ಕೊಡಬೇಕು. ಇದರ ಬಗ್ಗೆ ತಕ್ಷಣದ ಲ್ಲಿಯೇ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಹಾಗೂ ಹಂಪನಗೌಡರು ಸಿಂಧನೂರಿನ ಉಪ್ಪಳದಲ್ಲಿ ನಡೆದಿರುವ ಗಲಭೆ ಬಗ್ಗೆ ಸದನದಲ್ಲಿ ಪ್ರಸ್ತಾಪಮಾಡಿ ನನ್ನ ಗಮನಕ್ಕೆ ತಂದಿದ್ದಾರೆ. ನಾನು ಸಂಬಂಧಪಟ್ಟ ಎಸ್. ಪಿ. ಯಿಂದ ವರದಿಯನ್ನು ತರಿಸಿಕೊಂಡು ಯಾರು ತಪ್ಪಿಕಸ್ಥರಿರುತ್ತಾರೋ ಅವರ ಮೇಲೆ ಕ್ರಮ ಜರುಗಿಸಬೇಕೆಂದು ನಾನು ಹೇಳುತ್ತೇನೆ. ಆದರೆ ನಮಗೆ ಮೊದಲು ಪ್ರಿಮಿಮ್ ಎನ್ಕ್ವೈರಿ ಮಾಡಿದ ವರದಿಯಾದರೂ ಬರಬೇಕು. ಹಂಪನಗೌಡರಿಗೆ ತಿಳಿದಿರುವ ಹಾಗೆ ಸಿಂಧನೂರಿನಲ್ಲಿ ಇಂಥ ಗಲಭೆ ನಡೆಯುತ್ತಿರುವುದು ಇದೇ ಮೊದಲೇನಲ್ಲ. ಹತ್ತಾರು ವರ್ಷಗಳಿಂದ ಪರಸ್ಪರಾ ಹಾಗೂ ವಿರುದ್ಧವಾಗಿ ಗಲಭೆಗಳು ನಡೆಯುತ್ತಲೇ ಇರುತ್ತದೆ. ಆದರೆ ಇದಕ್ಕೆ ಯಾವುದೋ ಒಂದು ಗುಂಪಿನವರು ಕಾರಣಕರ್ತರು ಎಂದು ಹೇಳುವುದಕ್ಕೆ ಬರುವುದಿಲ್ಲ. ಅಲ್ಲಿ ಸಾಮಾಜಿಕ ವ್ಯವಸ್ಥೆಯೇ ಹಾಗಿದೆಯೋ ಅಥವಾ ರಾಜಕೀಯ ಬದಲಾವಣೆಯೇ ಹಾಗಿದೆಯೋ ನನಗಂತೂ ಗೊತ್ತಿಲ್ಲ. ಸಿಂಧೂನೂರುನಲ್ಲಿ ಗಲಾಟೆಯಾಗುವಂಥಾದ್ದು ವಿಶೇಷವಾಗಿ ಚುನಾವಣೆ ಮುಂಚೆ ಮತ್ತು ನಂತರ ಆಗುತ್ತದೆ. ಈಗ ತಾವು ತಿಳಿಸಿರುವಂಥ ವಿಷಯದ ಬಗ್ಗೆ ಸಂಬಂಧಪಟ್ಟಂತಹ ಎಸ್. ಪಿ. ಯವರಿಂದ ಮಾಹಿತಿಯನ್ನು ತರಿಸಿ ಕೊಂಡು ಮುಂದಿನ ಕ್ರಮವನ್ನು ಜರುಗಿಸುತ್ತೇನೆ.

(ಇ) ವಿಜಾಪುರದ ಹತ್ತಿರ ಮನವಳ್ಳಿ ಕ್ರಾಸ್ ಹತ್ತಿರ ಎರಡು ಲಾರಿಗಳು ಡಿಕ್ಕಿ ಹೊಡೆದು 25 ಜನ ಸತ್ತಿರುವುದು ಹಾಗೂ 44 ಜನರಿಗೆ ಗಾಯಗಳಾಗಿರುವುದು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನನಗೆ ಈಗ ತಾನೇ ವಿಷಯ ಗಮನಕ್ಕೆ ತಂದಿರುವಂಥಾದ್ದು ವಿಜಾಪುರದ ಹತ್ತಿರ ಮನವಳ್ಳಿ ಕ್ರಾಸ್ ಹತ್ತಿರ ಇವತ್ತು ಬೆಳಗಿನ ಜಾವ ಎರಡು ಲಾರಿಗಳು ಡಿಕ್ಕಿ ಹೊಡೆದು 25 ಜನರು ಸತ್ತಿದ್ದಾರೆ, 44 ಜನರಿಗೆ ಗಾಯಗಳಾಗಿದೆ. ಇದೊಂದು ದೊಡ್ಡ ದುರಂತವಾಗಿದೆ, ಅಲ್ಲಿ ಸರಿಯಾದಂತಹ ವ್ಯವಸ್ಥೆಯಾಗುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಸರ್ಕಾರ ಇವರ ಬಗ್ಗೆ ಮುತವರ್ಜಿಯನ್ನು ವಹಿಸಬೇಕೆಂದು ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ನಮ್ಮ ಡಿ. ಜಿ. ಪಿ. ಯವರು ಸಂಬಂಧಪಟ್ಟಂತಹ ಎಸ್. ಪಿ. ಯವರನ್ನು ಸಂಪರ್ಕಿಸಿ ಅಲ್ಲಿ ವ್ಯವಸ್ಥೆಯನ್ನು ಮಾಡ ಬೇಕೆಂದು ಹೇಳಿದ್ದಾರೆ. ತಾವು ಸಹ ಪುನಃ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದೀರಿ, ಈಗ ನಾನೇ ಸ್ವತಃ ಅಲ್ಲಿನ ಎಸ್. ಪಿ. ಯವರೊಡನೆ ಮಾತನಾಡಿ ಇದರ ಬಗ್ಗೆ ವ್ಯವಸ್ಥೆಯನ್ನು ಮಾಡುತ್ತೇನೆ.

(ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅನಾಥಾಶ್ರಮ ಮತ್ತು ವೃದ್ಧಾಶ್ರಮಕ್ಕೆ ಹಣ ಬಿಡುಗಡೆ.

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತಹ ಅನಾಥಾಶ್ರಮ ಮತ್ತು ವೃದ್ಧಾಶ್ರಮಕ್ಕೆ ಏಪ್ರಿಲ್ 1999ರಿಂದ ಹಣ ಬಿಡುಗಡೆಯಾಗಬೇಕಾಗಿತ್ತು. ಇದುವರೆಗೂ ಆದರೆ ದಿನಾಂಕ : 31-3-2000ರವರೆಗೂ ಈ ಗ್ರಾಂಟ್ ಬಿಡುಗಡೆಯಾಗಿಲ್ಲ. ಇವತ್ತು